ಸಿ.ಸಿ. ಸಂಃ 1103/2021 ಪಿ.ಡಬ್ಲ್ಯು 02

## ಪ್ರಥಮ ದರ್ಜೆ ನ್ಯಾಯಿಕಾಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು

## ಸಿ ಸಿ ನಂ. **1103/2021**

ದಿಃ **21-10-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

| | | | |
|---|---|---|---|
| ಹೆಸರು | ಫಯಾಜ್ ಎ | | |
| ವಯಸ್ಸು | 38 ವರ್ಷ | ಪಿ.ಡಬ್ಲ್ಯು: | **02** |
| ತಂದೆಯ ಹೆಸರು | ಎಸ್.ಎಫ್ ಅಲಿ ಸಾಹೇಬ್ | | |
| ವೃತ್ತಿ | ಕರ್ನಾಟಕ ಗ್ರಾಮೀಣ ಬ್ಯಾಂಕ್, ಗೌರಿಬಿದನೂರು ಶಾಖೆಯ ಮ್ಯಾನೇಜರ್ | | |
| ವಾಸಸ್ಥಳ | ಗೌರಿಬಿದನೂರು ನಗರ | | |

ಮುಖ್ಯ ವಿಚಾರಣೆಃಃ ಶ್ರೀ ಐ.ಎನ್.ಎನ್ ಫಿರ್ಯಾದುದಾರರ ಪರ ವಕೀಲರಿಂದಃ

ಈ ಪ್ರಕರಣದಲ್ಲಿ ಹಾಜರುಪಡಿಸಿರುವ ನಿಪಿ-3 ರ ರಿಟನ್ ಮೆಮೊವನ್ನು ನನ್ನ ಬ್ಯಾಂಕ್ ನಿಂದ ನೀಡಲಾಗಿದೆ. ನಿಪಿ-1 ರಲ್ಲಿ ದಿನಾಂಕ 11.12.2019 ಎಂದು ನಮೂದು ಆಗಿದೆ. ನಿಪಿ-3 ರಲ್ಲಿ ಚೆಕ್ ನ ದಿನಾಂಕ 12.11.2019 ಎಂದು ನಮೂದು ಆಗಿದ್ದು ಅದರಲ್ಲಿ ಮೊದಲು 12 ನೇ ತಿಂಗಳು ಎಂದು ನಮೂದು ಮಾಡಿ ನಂತರ 11 ನೇ ದಿನ ಮತ್ತು 2019 ನೇ ಇಸವಿ ಎಂದು ನಮೂದು ಮಾಡಲಾಗಿದೆ. ನಿಪಿ-1 ರ ಚೆಕ್ ಗೌರಿಬಿದನೂರಿನ ಎಸ್.ಬಿ.ಐ ಶಾಖೆಗೆ ಸಂಬಂಧಪಟ್ಟ ಚೆಕ್ ಆಗಿರುವ ಕಾರಣ ಹಾಗೂ ನನ್ನ ಬ್ಯಾಂಕ್ ಮತ್ತು ನಿಪಿ-1 ರ ಬ್ಯಾಂಕ್ ಗೌರಿಬಿದನೂರಿನಲ್ಲಿಯೇ ಇರುವ ಕಾರಣ ನಿಪಿ-3 ರ ಹಿಂಬರಹವನ್ನು ಒಂದೇ ದಿನದಂದು ನೀಡಲಾಗಿದೆ. ನಿಪಿ-1 ರಲ್ಲಿರುವ ದಿನಾಂಕ ಮತ್ತು ನಿಪಿ-3 ರಲ್ಲಿ ನಮೂದಿಸಿರುವ ಚೆಕ್ ನ ದಿನಾಂಕದ ಮಧ್ಯೆ ವ್ಯತ್ಯಾಸಗಳು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ನಿಪಿ-3 ರಲ್ಲಿ ತಿಂಗಳನ್ನು ಮೊದಲು ನಮೂದಿಸಿ ಅದರ ನಂತರ ದಿನಾಂಕ ಮತ್ತು ಇಸವಿಯನ್ನು ನಮೂದಿಸಲಾಗಿದೆ ಎಂದು ನುಡಿಯುತ್ತಾರೆ.

ಪಾಟೀ ಸವಾಲಿಗೆ ಆರೋಪಿ ಪರ ವಕೀಲರಾದ ಶ್ರೀ ಹೆಚ್.ಎಲ್.ವಿ ರವರು ಕಾಲಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-
ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,
ಗೌರಿಬಿದನೂರು